ಮಾತ್ರ ಪೂಜೆ ಮಾಡುತ್ತೇನೆ ಎಂದು ಹೇಳಿಬಿಡಲೆ? ಎಂದು ಒಂದೆರಡು ಬಾರಿ ಅನ್ನಿಸಿದ್ದರೂ ಸಮಯ ಬಂದಾಗ ನೋಡಿಕೊಳ್ಳೋಣ ಎಂದು ಸುಮ್ಮನಾದ.

ಈಗೀಗ ಅವನು ಎಷ್ಟು ಹೊತ್ತಿಗೆ ದೇವಸ್ಥಾನಕ್ಕೆ ಹೋದರೂ, ಎಷ್ಟು ಹೊತ್ತಿಗೆ ಪೂಜೆ ಮಾಡಿದರೂ ಯಾರೂ ಹೇಳಿ–ಕೇಳುವವರಿಲ್ಲ. ಅವನು ಮಾಡುವ ಪೂಜೆ ಕ್ರಮ ಸರಿಯಿಲ್ಲ ಎನಿಸಿದರೂ ಹೇಳುವಂತಿಲ್ಲ. ರಂಗನಾಥ ಒಬ್ಬ ಭಿನ್ನವಾದ ದನಿ ಎತ್ತಲು ಹೊರಟ. ಪೂಜೆ ಸರಿಯಾಗಿ ಆಗದಿದ್ರೆ ಊರಿಗೇ ತೊಂದರೆ ಎಂದು ಗುಟ್ಟಾಗಿ ಹಲವರ ಕಿವಿ ಕಚ್ಚಲು ನೋಡಿದ. ಆದರೆ, ಅವನ ಮಾತಿಗೆ ಯಾರೂ ಕಿವಿ ಕೊಡಲಿಲ್ಲ. ಅಷ್ಟೇ ಅಲ್ಲ, ಅಷ್ಟಿದ್ದರೆ ನೀನೇ ಪೂಜೆ ಮಾಡು ಎಂದು ಗಂಟು ಬೀಳಬೇಕೆ?

ತನ್ನ ಬುಡಕ್ಕೇ ಬರುತ್ತಿದ್ದಂತೆ ಅವನು ವಿಷಯವನ್ನೇ ಕೈಬಿಟ್ಟ.

ಭಾಸ್ಕರ ಭಟ್ಟನ ಬಗ್ಗೆ ಅಪಸ್ವರ ಮಾತ್ರ ಅಡಗಿಹೋಯಿತು.

ನಾಳೆ ತನಗೆ ಆಗುವುದಿಲ್ಲ ಎಂದು ಹೊರಟರೆ ಮತ್ತೆ ಯಾರನ್ನು ಪೂಜೆಗೆ ಹುಡುಕುವುದು?

ಕೆಲದಿನಗಳ ಅನಂತರ ಮೂಲ ವಿಗ್ರಹಕ್ಕೆ ಮಾತ್ರ ನಿತ್ಯ ಪೂಜೆ ಮಾಡಿ ಉಳಿದ ವಿಗ್ರಹಕ್ಕೆ ವಾರಕ್ಕೊಮ್ಮೆ ಪೂಜೆ ಮಾಡತೊಡಗಿದ.

ಮಠದ ಗುರುಗಳು ಈ ಭಾಗಕ್ಕೆ ಬಂದಾಗ ಮಠದ ಶಾಸ್ತ್ರಿಗಳನ್ನು ಕಂಡು ಸಮಸ್ಯೆ ವಿವರಿಸಿದ.

ಶಾಸ್ತ್ರಿಗಳು ಹೇಳಿಬಿಟ್ಟರು: ‘ನೀನು ದೇವಸ್ಥಾನದ ಅರ್ಚಕ. ಇವು ದೇವಸ್ಥಾನಲ್ಲಿ ಪ್ರತಿಷ್ಠಾಪನೆಗೊಂಡ ವಿಗ್ರಹಗಳಲ್ಲ. ನೀನು ಇವಕ್ಕೆ ಪೂಜೆ ಮಾಡಬೇಕೆಂದೇನೂ ಇಲ್ಲ. ನಿನಗೆ ಪೂಜೆ ಮಾಡಬೇಕೆಂದು ಅನಿಸಿದರೆ ಮಾಡಬಹುದು. ಬಿಟ್ಟರೂ ನಿನ್ನನ್ನು ಕೇಳಲು ಯಾರಿಗೂ ಹಕ್ಕಿಲ್ಲ. ಇಷ್ಟಕ್ಕೂ ಈ ವಿಗ್ರಹಗಳು ಮನೆ ಮನೆಗೆ ಸಂಬಂಧಿಸಿದ್ದು. ಅವರೇ ಮನೆಗೆ ತೆಗೆದುಕೊಂಡು ಹೋಗಬೇಕಾದದ್ದು ಕ್ರಮ.’

‘ಊರವರಿಗೆ ನೀವೇ ಹೇಳಿಬಿಡಿ’ ಎಂದು ಕೈ ಮುಗಿದ ಭಾಸ್ಕರ ಭಟ್ಟ.

ಶಾಸ್ತ್ರಿಗಳು ತಮ್ಮ ತಮ್ಮ ವಿಗ್ರಹವನ್ನು ಮನೆಗೆ ತೆಗೆದುಕೊಂಡು ಹೋಗಲು ಎಲ್ಲರಿಗೂ ಸೂಚಿಸಿದರು.

ನಾಲ್ಕಾರು ದಿನ ಕಳೆಯಿತು. ಯಾರೂ ತೆಗೆದುಕೊಂಡು ಹೋಗಲಿಲ್ಲ.

ಭಾಸ್ಕರ ಭಟ್ಟ ಮತ್ತೂ ಎರಡು ದಿನ ನೋಡಿದ. ಒಂದು ದಿನ ದೇವರಿಗೆ ಮೋಕ್ಷ ಕಲ್ಪಿಸುವ ಕಾರ್ಯಾಚರಣೆಗಿಳಿದ. ರಾತ್ರೋ ರಾತ್ರಿ ಎಲ್ಲ ಮನೆ ಮನೆ ವಿಗ್ರಹಗಳನ್ನು ಗಂಟುಮೂಟೆ ಕಟ್ಟಿ ಮುಳುಗಡೆ ಹೊಳೆಗೆ ಹೋಗಿ ಮುಳುಗಿಸಿ, ಮನೆಗೆ ಬಂದು ಗಡದ್ದು ನಿದ್ದೆ ಮಾಡಿದ. ಎಲ್ಲ ಸಣ್ಣಪುಟ್ಟ ದೇವರ ವಿಗ್ರಹಗಳಿಗೆ ಮೋಕ್ಷ ಕರುಣಿಸಿದ ಭಾಸ್ಕರ ಭಟ್ಟನನ್ನು ಯಾರೂ ಏನೂ ಕೇಳಲಿಲ್ಲ.

ಕೇಳುವ ಧೈರ್ಯ ಮಾತ್ರ ಯಾರಿಗೂ ಇರಲಿಲ್ಲ.

### ಟಿ.ಎಂ. ಶೇಷಗಿರಿ ತುಮರಿ

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ತುಮರಿಯವರು. ಮೂಲತಃ ಕೃಷಿಕರು. ‘ದೇವಾಲಯದ ಬುಡದಲ್ಲೊಂದು ಗಿಡ’, ‘ಕುತೂಹಲದ ಕಥೆಗಳು’ ಎಂಬ ಕಥಾಸಂಕಲನಗಳು ಪ್ರಕಟವಾಗಿವೆ. ‘ಶ್ರೀ ಸಿಗಂದೂರು ಕ್ಷೇತ್ರ ಮಹಾತ್ಮೆ’, ‘ಸ್ವರ್ಗ ಸಂತಾಪ’, ‘ವಂದೇಗೋಮಾತರಂ’ ಸೇರಿದಂತೆ 12ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಳನ್ನು ರಚಿಸಿದ್ದು, ಅವುಗಳ ಸಾವಿರಾರು ಪ್ರದರ್ಶನಗಳಾಗಿವೆ. ಭದ್ರಾವತಿ ಆಕಾಶವಾಣಿ ಕಲಾವಿದರಾಗಿ 30ಕ್ಕೂ ಹೆಚ್ಚು ಯಕ್ಷಗಾನಪ್ರಸಂಗಗಳ ಕಾರ್ಯಕ್ರಮಗಳನ್ನು ನೀಡಿದ್ದಾರೆ. ದೂರದರ್ಶನದಲ್ಲೂ ಯಕ್ಷಗಾನ ಕಾರ್ಯಕ್ರಮ ನೀಡಿದ್ದಾರೆ. ಯಕ್ಷಬಳಗ ಕಲಾತಂಡ ಸಂಘಟಿಸಿ ರಾಜ್ಯದಾದ್ಯಂತ 3,500ಕ್ಕೂ ಹೆಚ್ಚು ಪ್ರದರ್ಶನ ನೀಡಿದ್ದಾರೆ.